ತಯಾರು ಮಾಡದೆ ನೂಲನ್ನು ತಯಾರು ಮಾಡಿ ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಆದ್ದರಿಂದ ಇದನ್ನು ಸರಿಪಡಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಕಾನೂನು ಪ್ರಕಾರ ಏನು ಕ್ರಮವನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ.

Gundal Reservoir Project in Kollegal Taluk

478 SRI G. RAJU GOWDA (Hanur).-Will the Minister for Revenue and Agriculture be pleased to state.-

(a) whether it is a fact that the compensation to the owners of land which was acquired for construction of Right and Left Bank Channel of Gundal Reservoir Project in Kollegal Taluk has not been paid so far ;

(b) if so, the reasons ?

SRI S. BANGARAPPA (Minister for Revenue and Agriculture) —

(a) Yes.

(b) The Acquisition Proceedings are in several stages as per the provisions of L. A. Act. Payment will be made soon after the acquisition proceedings are finalised.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಈ ಗುಂಡಲ್ ಜಲಾಶಯದ ಯೋಜನೆಗೆ ಸಂಬಂಧಪಟ್ಟ ಹಾಗೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಜಮೀನಿನ ಮಾಲೀಕರಿಗೆ ಪರಿಹಾರವನ್ನು ಕೊಡುವ ಬಗ್ಗೆ ಪೂರ್ವ ಭಾವಿ ಕ್ರಮ ಮುಗಿದಿದೆಯೇ ? ಮತ್ತು ಈಗ ಅದು ಯಾವ ಘಟ್ಟದಲ್ಲಿ ಇದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಸಂಬಂಧಪಟ್ಟ ಹಾಗೆ ೮ ಕೇಸುಗಳು ಇವೆ. ಒಂದು ಆಕ್ವಿಜಿಷನ್ ಕೇಸ್‌ನಲ್ಲಿ ಅವಾರ್ಡ್ ಅಪ್ರೂವ್ ಆಗಿದೆ. ಅವಾರ್ಡ್ ಅಪ್ರೂವ್ ಆಗಿ ಹಣ ಕೊಡತಕ್ಕ ಸಂದರ್ಭದಲ್ಲಿ ಒಂದು ಕೇಸು ಇದೆ. ೨ ಕೇಸುಗಳ ಸಂಬಂಧದಲ್ಲಿ ಸೆಕ್ಷನ್ ೬೧೦ರ ಪ್ರಕಾರ ಅವಾರ್ಡ್ ನೋಟೀಸ್ ಜಾರಿಯಾಗಿದೆ. ಕ್ಲೈಮ್ಸ್ ಪರಿಶೀಲಿಸುತ್ತಿದ್ದಾರೆ. ಇನ್ನು ಉಳಿದಿರುವ ಕೇಸುಗಳ ಸಂಬಂಧದಲ್ಲಿ ಮೆಜರ್‌ಮೆಂಟ್ ಆಗಿ ಫೈನಲ್ ನೋಟಿಫಿಕೇಷನ್ ಇಷ್ಯೂ ಮಾಡುವ ಹಂತದಲ್ಲಿ ಇದೆ.

ಶ್ರೀ ಜಿ. ರಾಜುಗೌಡ.—ಇದು ಕೇವಲ ಒಂದು ಗ್ರಾಮಕ್ಕೆ ಸಂಬಂಧಪಟ್ಟ ಹಾಗೆ ಆಗಿದೆ. ಇನ್ನು ೪ ಗ್ರಾಮಗಳಲ್ಲಿ ಜಲಾಶಯದ ಬಲ ಮತ್ತು ಎಡದಂಡೆ ನಾಲೆಗಳ ನಿರ್ಮಾಣ ಕಾಮಗಾರಿಗೆ ಸ್ವಾಧೀನಪಡಿಸಿಕೊಂಡ ಜಮೀನಿನ ಮಾಲೀಕರಿಗೆ ಪರಿಹಾರವನ್ನು ಕೊಡುವ ಬಗ್ಗೆ ಇನ್ನೂ ಏನೂ ತೀರ್ಮಾನ ಆಗಿಲ್ಲ. ಈಗಾಗಲೇ ೫ ವರ್ಷಗಳು ಕಳೆದುಹೋಗಿದೆ. ರೈತರಿಗೆ ಪರಿಹಾರ ಧನ ದೊರೆತಿಲ್ಲ. ಕಾನೂನಿನಲ್ಲಿ ಕೆಲವು ನ್ಯೂನತೆಗಳು ಇವೆ. ಬಡವರಿಗೆ ನಿವೇಶನವನ್ನು ಕೊಡುವುದಕ್ಕಾಗಿ ಜಮೀನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಇರತಕ್ಕ ಕಾನೂನು ಇಟ್ಟುಕೊಂಡಿದ್ದಾರೆ. ಜನರಲ್ ಆಕ್ವಿಜಿಷನ್ ಕಾನೂನು ಮಾಡಿಕೊಂಡು ಇದನ್ನು ಬೇಗನೆ ಮಾಡಬೇಕು. ಮೊದಲನೇ ನೋಟಿಫಿಕೇಷನ್ ರೈತರಿಗೆ ಜಾರಿ ಆಗದೆ ಅಲ್ಲಿಂದ ಅವು ಹಾಗೆಯೇ ವಾಪಸ್ಸು ಬಂದಿವೆ. ಇದರಿಂದಾಗಿ ಮತ್ತೇ ನೋಟಿಫಿಕೇಷನ್ ಆಗಬೇಕಾದ ಸಂದರ್ಭಗಳು ಬರುತ್ತವೆ. ಆದ್ದರಿಂದ ಇಂಥಾ ಪ್ರಕರಣಗಳ ಬಗ್ಗೆ ಬೇಗ ಪರಿಹಾರವನ್ನು ರೈತರಿಗೆ ಕೊಡುವ ದೃಷ್ಟಿಯಿಂದ ಈ ಕಾನೂನನ್ನು ತಿದ್ದುಪಡಿ ಮಾಡುವ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಈ ಗುಂಡಾಲ್ ಜಲಾಶಯದ ಎಡದಂಡೆ ಮತ್ತು ಬಲದಂಡೆ ನಾಲೆಗಳು ಏನಿವೆ ಇವುಗಳ ನಿರ್ಮಾಣ ಕಾಮಗಾರಿಗೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ೪ ಹಳ್ಳಿಗಳ ಬಗ್ಗೆ ಮಾನ್ಯ

ಸದಸ್ಯರು ಏನು ಹೇಳಿದ್ದಾರೆ, ಈ ಅಕ್ವಿಜಿಷನ್ ಕೇಸುಗಳು ಬೇರೆ ಬೇರೆ ಕಾರಣದಿಂದ ತಡವಾಗಿದೆ ಆದ್ದರಿಂದ ಇದನ್ನು ಈಗ ಇರತಕ್ಕ ಕಾನೂನು ಪ್ರಕಾರವೇ ಶೀಘ್ರವಾಗಿ ಲ್ಯಾಂಡ್ ಅಕ್ವಿಜಿಷನ್ ಕಾರ್ಯಕ್ರಮ ತೆಗೆದುಕೊಂಡು ಸಂಬಂಧಪಟ್ಟ ಜಮೀನಿನ ಭೂಮಾಲೀಕರಿಗೆ ಪೇಮೆಂಟ್ ಮಾಡಬೇಕು ಎಂದು ನಾನು ಮತ್ತೆ ಆದೇಶ ಕೊಡುತ್ತೇನೆ.

All India Permit Tourist Buses

497 SMT. S. PRAMILA (Chamarajapet).--Will the Minister for Transport and Minor Irrigation be pleased to state :—

(a) whether it has come to the notice of Government that the All India Permit Tourist Buses are operating as if regular route-wise buses daily instead of operating for the benefit of tourist ;

(b) whether the A.I.P.T. buses are picking passengers on the route *i.e.*, Bangalore Cannanore ;

(c) if so, how many A.I.P.T. buses are running and how many are running without valid and bogus permits ?

SRI M. M. J. SADYOJATHA (Minister for Transport and Minor Irrigation).—

(a) Yes

(b) Yes

(c) Four A.I.P.T. buses are running on route Bangalore to Cannanore covered with All India Permits and no reports have been received as to the number of buses running without valid and bogus permits.

ಶ್ರೀಮತಿ ಎಸ್. ಪ್ರಮಿಳ.—ಸ್ವಾಮಿ ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ಪರವಾನೆ ಪಡೆದ ಪ್ರವಾಸಿ ಬಸ್ಸುಗಳು ಪ್ರವಾಸಿಗರ ಅನುಕೂಲಕ್ಕಾಗಿ ಕಾರ್ಯ ನಿರ್ವಹಿಸುವ ಬದಲಾಗಿ ನಿಯತ ಮಾರ್ಗಗಳಲ್ಲಿ ಓಡಾಡುವ ಬಸ್ಸುಗಳ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಕ್ಕೆ ಹೌದು ಎಂದು ಉತ್ತರ ಕೊಟ್ಟಿದ್ದೀರಿ, ಹಾಗಾದರೆ ಯಾರು ಯಾರಿಗೆ ಸೇರಿದ ಬಸ್ಸುಗಳು ಈ ರೀತಿ ಕಾನೂನಿಗೆ ವಿರುದ್ಧವಾಗಿ ಸ್ಟೇಟ್ ಕ್ಯಾರೇಜುಗಳಾಗಿ ಉಪಯೋಗಿಸುತ್ತಿದ್ದಾರೆ, ಅವರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಇದರ ಬಗ್ಗೆ ೧೧ ಕೇಸುಗಳಿಗೆ ಸಂಬಂಧಪಟ್ಟ ರಿಪೋರ್ಟ್‌ಗಳು ಇವೆ. ಇವು ಪ್ರೂವ್ ಆಗಿವೆ. ಇವುಗಳಲ್ಲಿ ೯ ಕೇಸುಗಳು ಇತ್ಯರ್ಥವಾಗಿವೆ. ಎರಡು ಕೇಸುಗಳು ಪೆಂಡಿಂಗ್ ನಲ್ಲಿವೆ.

ಶ್ರೀಮತಿ ಎಸ್. ಪ್ರಮಿಳ.—ಈ ಬಸ್ಸುಗಳ ಪರ್ಮಿಟನ್ನು ಕ್ಯಾನ್ಸಲ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಇವುಗಳ ಪರ್ಮಿಟ ಕ್ಯಾನ್ಸಲ್ ಮಾಡಿಲ್ಲ, ಅವರಿಗೆ ಫೈನ್ ಹಾಕಿದ್ದೇವೆ.

ಶ್ರೀಮತಿ ಎಸ್. ಪ್ರಮಿಳ.—ಅಖಿಲ ಭಾರತ ಪರವಾನೆ ಪಡೆದ ಪ್ರವಾಸಿ ಬಸ್ಸುಗಳು ಪ್ರವಾಸಿಗರ ಅನುಕೂಲಕ್ಕಾಗಿ ಕಾರ್ಯನಿರ್ವಹಿಸುವ ಬದಲಾಗಿ ನಿಯತ ಮಾರ್ಗಗಳಲ್ಲಿ ಓಡಾಡುವ ಬಸ್ಸುಗಳ ರೀತಿಯಲ್ಲಿ ಬೆಂಗಳೂರಿನಿಂದ ಕಣ್ಣಾನೂರಿಗೆ ಓಡಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು